ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಅವರು ನಿರ್ಭಾಗ್ಯರು ಎಂದು ತಾವು ಹೇಳಿದ ಮೇಲೆ ನಾನೂ ಆ ಪ್ರದೇಶಕ್ಕೆ ಬೇಟಿ ಕೊಟ್ಟು, ಅದನ್ನು ಈಗಾಗಲೇ ಸರ್ಕಾರ ನೋಟಿಫೈ ಮಾಡಿ ಸ್ಲಂ ಏರಿಯಾ ಎಂದು ಡಿಕ್ಲೇರ್ ಮಾಡಿ ಅದರ ಕಾರ್ಯಕ್ರಮಗಳನ್ನು ಮುಗಿಸಿದ್ದೇವೆ. ಆದರೆ ಎಸ್ಟಿಮೇಟ್ ಮತ್ತು ಪ್ಲಾನ್ ಬಂದಿಲ್ಲ, ಅದಕ್ಕೆ ಏನು ಕಾರಣ ಎನ್ನುವುದನ್ನು ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಕೆ.ಎಚ್. ಹನುಮೇಗೌಡ.—ಉತ್ತರದಲ್ಲಿ ಅಲ್ಲಿ ಮನೆಗಳನ್ನು ಕಟ್ಟಿಸಿ ಅಲ್ಲಿಯ ನಿವಾಸಿಗಳಿಗೆ ಕೊಡಬೇಕೆಂದು ಸರ್ಕಾರ ಉದ್ದೇಶಿಸಿದೆ ಎಂದು ಹೇಳಿದ್ದೀರಿ. ಯಾವ ಫಂಡ್‌ನಿಂದ ಕಟ್ಟಿಕೊಡಬೇಕು ಎಂದು ಸರ್ಕಾರ ಉದ್ದೇಶಿಸಿದೆ ಮತ್ತು ಹಣವನ್ನು ಹೊಂದಿಸಿಕೊಳ್ಳುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಆದನ್ನು ಈಗಾಗಲೇ ಸ್ಲಂ ಕ್ಲಿಯರೆನ್ಸ್ ಬೋರ್ಡ್ ಪರಿಶೀಲಿಸಿದ್ದೇವೆ. ಆವರು ಅದಕ್ಕೆಲ್ಲಾ ಏರ್ಪಾಡು ಮಾಡುತ್ತಾರೆ. ಸರ್ಕಾರ ಕೊಡತಕ್ಕ ಫಂಡ್‌ನಲ್ಲಿ ಖರ್ಚು ಮಾಡುತ್ತಾರೆ.

ಶ್ರೀ ಕೆ. ಎಚ್. ಹನುಮೇಗೌಡ.—ನನಗೆ ತಿಳಿದ ಮಟ್ಟಿಗೆ ಸ್ಲಂ ಕ್ಲಿಯರೆನ್ಸ್ ಬೋರ್ಡ್ ಏನಿದೆ ಅದು ಕೊಳಚೆ ಪ್ರದೇಶವನ್ನು ಅಭಿವೃದ್ಧಿಪಡಿಸುವುದು, ರೋಡು ಮಾಡುವುದು, ಡ್ರೈನೇಜ್ ಮಾಡುವುದು, ಎಲೆಕ್ಟ್ರಿಸಿಟಿ, ನೀರು ಕೊಡುವುದು ಈ ಕೆಲಸಗಳನ್ನು ಮಾಡುತ್ತದೆ. ಆದರೆ ಮನೆಗಳನ್ನು ಕಟ್ಟಿ ಕೊಡುವುದಕ್ಕೆ ಯಾವ ಫಂಡ್‌ನಿಂದ ವ್ಯವಸ್ಥೆ ಮಾಡಿದ್ದೀರಿ ಮತ್ತು ಮನೆಗಳನ್ನು ಕಟ್ಟಿಕೊಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

SRI H C. SRIKANTAIAH.—While answering your question we have said like this: 'The Board intends to demolish the huts, develop the area, contruct houses in the said area' ಎಂದು ಹೇಳಿದ್ದೇನೆ. ಸ್ಲಂ ಕ್ಲಿಯರೆನ್ಸ್ ಬೋರ್ಡ್‌ನಲ್ಲಿ ಫಂಡ್ಸ್ ಇದೆ, ಮಾಡುತ್ತಾರೆ. ರಸ್ತೆ ಚರಂಡಿ, ಸ್ಯಾನಿಟರಿ ವರ್ಕ್ಸ್, ಮನೆಗಳನ್ನು ಕಟ್ಟಿಸುವುದು ಎಲ್ಲವನ್ನೂ ಸ್ಲಂ ಕ್ಲಿಯರೆನ್ಸ್ ಬೋರ್ಡ್ ಮಾಡುತ್ತದೆ.

ಶ್ರೀ ಕೆ.ಎಚ್. ಹನುಮೇಗೌಡ.—ತಾವು ಬಂದು ನೋಡಿ ಆರು ತಿಂಗಳಾಯಿತು ; ತಕ್ಷಣ ವ್ಯವಸ್ಥೆ ಮಾಡಿದಿರಿ, ಆದರೆ ಕೆಲಸ ಆಗಿಲ್ಲ. ಎಷ್ಟು ದಿವಸಗಳಲ್ಲಿ ಮುಗಿಸುತ್ತೀರಿ ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಆದಷ್ಟು ಜಾಗ್ರತೆ ಮುಗಿಸುತ್ತೇವೆ.

(Held over from 45th List)

Absorbing Gang workers of P.W.D. on Permanent basis

613 SRI M.Y. PATIL (Afzalpur).—Will the Chief Minister pleased to state.—

(*a*) the total number of Gang workers on the rolls of the P.W.D. throughout the entire State;

(*b*) whether they are paid their wages on daily wage basis or on monthly basis.

(*c*) whether the Government has any proposal to absorb them on permanent basis ?

SRI D. DEVARAJ URS (Chief Minister).—

(*a*) 11,098.

(*b*) These Gang workers are paid on daily wage basis.

(*c*) Yes.

ಶ್ರೀ ಎಂ.ವೈ. ಪಾಟೀಲ್.—ಮಾನ್ಯ ಮುಖ್ಯ ಮಂತ್ರಿಗಳು ಉತ್ತರದಲ್ಲಿ ಈಗಾಗಲೇ ೧೧ ಸಾವಿರ ಚಿಲ್ಲರೆ ಗ್ಯಾಂಗ್‌ಮನ್ನರು ಇದ್ದಾರೆ ಎಂದು ಹೇಳಿದ್ದಾರೆ. ಅವರು ಸುಮಾರು ೨೦ ವರ್ಷಗಳ ಕಾಲದಿಂದ ಟೆಂಪೊರರಿ ಬೇಸಿಸ್ ಮೇಲೆ ಅಂದರೆ ದಿನಗೂಲಿ ಮೇಲೆ ಕೆಲಸ ಮಾಡುತ್ತಿದ್ದಾರೆ. ಅವರನ್ನು ಖಾಯಂ ಮಾಡುತ್ತೇವೆ. ಎಂದು ಉತ್ತರದಲ್ಲಿ ಹೇಳಿದ್ದಾರೆ. ಅದನ್ನು ಯಾವಾಗ ಮಾಡುತ್ತಾರೆ ಎಂದು ನಿರ್ದಿಷ್ಟವಾದ ವೇಳೆಯನ್ನು ಕೊಡಬೇಕು ಎಂದು ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

†ಶ್ರೀ ಡಿ. ದೇವರಾಜ ಅರಸ್.–ಅವರನ್ನು ಖಾಯಂ ಮಾಡಬೇಕು ಎನ್ನುವ ಉದ್ದೇಶ ಸರ್ಕಾರಕ್ಕೆ ಇದ್ದರೂ ಕೂಡ ಹಣದ ಕೊರತೆ ಇರುವುದರಿಂದ ಸ್ವಲ್ಪ ಮುಂದುವರಿದು ಹೋಗುತ್ತಿದೆ.

ಶ್ರೀ ಎಂ. ವೈ. ಪಾಟೀಲ್.—ಹಂತಹಂತವಾಗಿ ಮಾಡಿದರೆ ಆ ಜನರಿಗೆ ಅನುಕೂಲವಾಗುತ್ತದೆ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಅದರಲ್ಲಿ ನಮ್ಮದೇನೂ ಬೇರೆ ಅಭಿಪ್ರಾಯವಿಲ್ಲ. ೧೧ ಸಾವಿರ ಏನಿತ್ತು ಅದು ಒಂದು ಸಾರಿ ಆಗಿದೆ. ಗ್ಯಾಂಗ್ ವರ್ಕ್‌ಸ್ಸ್, ವರ್ಕ್ ಚಾರ್ಜ್ ಎಂಪ್ಲಾಯೀಸ್ ಹಿಂದನ್ನೂ ಮಾಡಿದ್ದೇವೆ. ಇನ್ನೊಂದು ಫೆನಾನ್ಸ್ ಡಿಪಾರ್ಟ್‌ಮೆಂಟಿನಲ್ಲಿ ಹಣ ಇಲ್ಲ ಎಂದು ಹೇಳಿ ಮುಂದು ವರೆಯುತ್ತಾ ಇದೆ.

ಶ್ರೀ ಎಸ್. ಬಂಗಾರಪ್ಪ.— ಸ್ವಾಮಿ, ದಿನಗೂಲಿ ಮೇಲಿರತಕ್ಕವರು ೧೧ ಸಾವಿರ ಚಿಲ್ಲರೆ ವರ್ಕ್ ಚಾರ್ಜ್ ೧೩ ಸಾವಿ ಚಿಲ್ಲರೆ ಒಟ್ಟು ೨೪,೨೫ ಸಾವಿರ ಜನ ಆಗಬಹುದು. ಅದಕ್ಕೆ ನಾವು ಆವಾಗ ಇದರ ಬಗ್ಗೆ ಸರ್ಕಾರದವರು ಚರ್ಚೆ ಮಾಡಿದಾಗ ತಾವೇ ಒಳ್ಳೆಯ ಮನಸ್ಸು ಮಾಡಿ ೨೪ ಸಾವಿರ ಚಿಲ್ಲರೆ ಜನರನ್ನು ಕೂಡ ಖಾಯಂ ಮಾಡಬಹುದು ಎನ್ನತಕ್ಕ ಅಭಿಪ್ರಾಯವನ್ನು ಕೊಟ್ಟಿದ್ದೀರಿ. ತಾವು ಆ ರೀತಿ ಅಭಿಪ್ರಾಯ ಕೊಟ್ಟ ಮೇಲೆ ಆ ನೀತಿಯನ್ನು ಅನುಸರಿಸಿಯೇ ಶಾಸನ ಸಭೆಯಲ್ಲಿ ಸರ್ಕಾರದ ವತಿಯಿಂದ ಹೇಳಿಗಳನ್ನು ಕೊಟ್ಟಿದ್ದು ಆಗಿದೆ. ಆವರನ್ನು ಖಾಯಂ ಮಾಡುವುದರಿಂದ ಹಣಕಾಸಿನ ಪರಿಸ್ಥಿತಿಯ ಮೇಲೆ ಏನೂ ಹೆಚ್ಚಿನ ಪರಿಣಾಮವಾಗಲಾರದು ಎನ್ನತಕ್ಕ ಅಭಿಪ್ರಾಯ ಕೂಡ ಬಂದಿತ್ತು, ಆದರ ಬಗ್ಗೆ ಕೂಡ ತಾವುಒಪ್ಪಿಗೆ ಕೊಟ್ಟಿದ್ದೀರಿ, ಈ ೧೧ಸಾವಿರ ಚಿಲ್ಲರೆ ದಿನಗೂಲಿ ಕೆಲಸಗಾರರು ಏನಿದ್ದಾರೆ ಅವರನ್ನು ಖಾಯಂ ಮಾಡತಕ್ಕದರ ಬಗ್ಗೆ ಎರಡೂ ಮನೆಯಲ್ಲೂ ಅವಿಷಯವನ್ನು ಪ್ರಕಟ ಮಾಡಿದೆವು. ಅದಕ್ಕೆ ಸರ್ಕಾರ ಕೂಡ ಬದ್ಧವಾಗಿದೆ. ಇದರಿಂದ ಹಣಕಾಸಿನ ಪರಿಸ್ಥಿತಿಯ ಮೇಲೆ ಸ್ವಲ್ಪ ಪರಿಣಾಮ ಬೀರಬಹುದಾಗಿರುವುದರಿಂದ ಇದನ್ನು ಹಂತ ಹಂತವಾಗಿ ಮಾಡಬೇಕು ಎನ್ನುವ ದೃಷ್ಟಿಯಿಂದ ಫಸ್ಟ್ ಕಂ ಫಸ್ಟ್ ಲಿ ಕನ್‌ಫರಂ ಎನ್ನುವ ಆಧಾರದ ಮೇಲೆ ಇದನ್ನು ಬಗೆಹರಿಸಲಾಗುತ್ತದೆಂದು ಎರಡೂ ಸದನಗಳಲ್ಲಿ ಹೇಳಲಾಗಿತ್ತು. ನಾನು ಪಿ. ಡಬ್ಲ್ಯೂ.ಡಿ.ಸಚಿವನಾಗಿದ್ದಾಗ ಇದರ ಬಗ್ಗೆ ಹಣಕಾಸಿನ ಪರಿಸ್ಥಿತಿ ಬಗ್ಗೆ ಮಂತ್ರಿಲಾ ಡಿಪಾರ್ಟ್‌ಮೆಂಟಿನಿಂದ ಒಪ್ಪಿಗೆ ಪಡೆದಿದ್ದೆ ಅದುದರಿಂದ ಅದು ಇನ್ನು ಆಜ್ಞೆ ಹೊರಡುವ ಸ್ಥಿತಿಯಲ್ಲಿತ್ತು. ಆದುದರಿಂದ ಅಷ್ಟು ಜನ ಬಡವರಿಗೆ ಅನುಕೂಲ ಮಾಡುವ ದೃಷ್ಟಿಯಿಂದ ಇದನ್ನು ದಯಮಾಡಿ ಆದಷ್ಟು ಬೇಗನೆ ಆಜ್ಞೆ ಹೊರಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.— ಈ ವರ್ಷದಲ್ಲಿ ಸಾಧ್ಯವಿಲ್ಲ. ಮುಂದಿನ ವರ್ಷದಲ್ಲಿ ಸೀರಿಯಸ್ ಆಗಿ ಕನ್‌ಸಿಡರ್ ಮಾಡೋಣ.

ಶ್ರೀ ಬಿ. ವಿ. ಕಕ್ಕೆಲಾಯ.— ಬೆಳಗಾಂ ಇಂಡಸ್ಟ್ರಿಯಲ್ ಟ್ರಿಬ್ಯೂನಲ್ ರವರು ಈ ದಿನಗ್ಟೂ ಕೆಲಸಗಾರರನ್ನು ಖಾಲಿಯಂ ಗೊಳಿಸಬೇಕು ಎನ್ನತಕ್ಕದರ ಬಗ್ಗೆ ಒಂದು ತೀರ್ಪನ್ನು ಕೊಟ್ಟಿದ್ದಾರೆ. ಆ ತೀರ್ಪನ್ನು ಎಲ್ಲಾ ಭಾಗಗಳಲ್ಲಿಯೂ ಜಾರಿಗೆ ತರುತ್ತಾರೆಯೇ ? ಮತ್ತೆ ಹಂತ ಹಂತವಾಗಿ ಬೇರೆ ಎಲ್ಲಾ ಕಡೆಗಳಲ್ಲೂ ಇದನ್ನು ಜಾರಿಗೆ ಗೊಳಿಸಿ ಅವರನ್ನು ಖಾಯಂ ಗೊಳಿಸಿ ಇಲ್ಲದಿದ್ದರೆ ಇಂಡಸ್ಟ್ರಿಯಲ್ ಟ್ರಿಬ್ಯೂನಲ್‌ನ ತೀರ್ಪಿಗೆ ವಿರುದ್ಧವಾಗಿ ಹೋದ ಹಾಗೆ ಆಗುತ್ತದೆ. ಆದುದರಿಂದ ಇದನ್ನು ಆದಷ್ಟು ಬೇಗ ಜಾರಿಗೆ ಗೊಳಿಸಿ ಕ್ರಮ ತೆಗೆದುಕೊಂಡು ಯಾವಾಗ ಮಾಡುತ್ತೀರಾ ಸ್ವಾಮಿ ?

SRI D. DEVARAJ URS.— I am glad the Hon. Member has brought it the notice of the Govt. that there is a decision by the Indusatrial Tribunal. As I said already, in principale we have agreed to make

these people permanent, but that is being delayed because of want of funds. As I said earlier, all these questions will be taken up next year.

ಶ್ರೀ ಎಸ್. ಬಂಗಾರಪ್ಪ.— ಸ್ವಾಮಿ, ಇದರ ಬಗ್ಗೆ ಹೈದರಾಬಾದ್ ಕರ್ನಾಟಕದಿಂದಲೂ ಕೆಲವು ತೀರ್ಪುಗಳು ಬಂದಿದ್ದಾವೆ. ಇದರ ಬಗ್ಗೆ ಬಹಳ ಕಡೆಗಳಿಂದಲೂ ದೂರುಗಳು ಬರುತ್ತಿವೆ, ಇದನ್ನು ಅವರು ಸರ್ಕಾರದ ಗಮನಕ್ಕೆ ತರುತ್ತಲೇ ಇದ್ದಾರೆ. ಈ ವಿಷಯವನ್ನು ಗಣನೆಗೆ ತೆಗೆದುಕೊಳ್ಳತಕ್ಕ ವಿಚಾರದಲ್ಲಿ ಅಧಿಕಾರಿಗಳ ಮಟ್ಟದಲ್ಲಿ ಬಹಳ ತಡವಾಯಿತು ಎನ್ನುವ ಅಪಾದನೆ ಪದೇ ಪದೇ ಬರುತ್ತಿದೆ ಆದಕ್ಕೆ ಈ ವಿಚಾರದಲ್ಲಿ ತಕ್ಷಣವೇ ಗಮನಕ್ಕೆ ತೆಗೆದುಕೊಳ್ಳಬೇಕು ಎನ್ನತಕ್ಕ ಅಭಿಪ್ರಾಯವನ್ನೂ ಕೂಡ ಆವಾಗ ಮಾಡಿ. ಈ ವರ್ಷದಿಂದಲೇ ಇದನ್ನು ಪಂತ ಪಂತವಾಗಿ ಜಾರಿಗೆ ತೆಗೆದುಕೊಳ್ಳಬೇಕೆಂದು ಮೇಲ್ಮೆ ನೆಯಲ್ಲೂ ಮತ್ತು ಇಲ್ಲೂ ಹೇಳಿಕೆ ಕೊಡಲಾಗಿರುವುದರಿಂದ ಇದನ್ನು ಈ ವರ್ಷವೇ ಕೈಕೊಂಡು ಮುಂದಿನ ವರ್ಷಕ್ಕೆ ಈಗಲಾದರೂ ಮಾಡುತ್ತೀರಾ ಎಂದು ಜನ ನಂಬಿಕೊಂಡಿದ್ದಾರೆ ಆದುದರಿಂದ ತಾವು ದಯವಿಟ್ಟು ಆದನ್ನು ಈ ವರ್ಷದಿಂದಲೇ ಪ್ರಾರಂಭ ಮಾಡುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಡಿ. ದೇವರಾಜ್ ಅರಸ್.— ಸ್ವಾಮಿ, ಇದರ ಬಗ್ಗೆ ಆಗಲೇ ನಾನು ಉತ್ತರ ಹೇಳಿದ್ದೇನೆ.

Bridge across Hemavatht River near Kuttkyathanahalli Krishnarajapet Taluk.

459. SRI S. M. LINGAPPA (Krishnarajapet) .— Will the Chief Minister be pleased to state .—

(a) when the estimate of the proposed Bridge across Hemavathi River near Kuttekyathanahalli in Krishnarajapet Taluk was prepared;

(b) when the estimate for the work was sanctioned ?

SRI D. DEVARAJ URS (Chief Minister) .—

(a) The Estimate was prepared during 1970-71.

(b) The Estimate received the sanction of the Government on 7th April 1971.

ಶ್ರೀ ಎಸ್. ಎಂ. ಲಿಂಗಪ್ಪ.— ಕಟ್ಟೆ ಕ್ಯಾತನ ಪಳ್ಳಿ ಬಳಿ ನಿರ್ಮಿಸಲು ಉದ್ದೇಶಿಸಿರುವ ಸೇತುವೆ ಕಾಮಗಾರಿಗಾಗಿ ಅಂದಾಜು ಮಾಡಲಾಗಿರುವ ಮೊಬಲಗೆಷ್ಟು ಮತ್ತು ಇಲ್ಲಿಯವರೆಗೆ ಎಷ್ಟು ಹಣ ಖರ್ಚಾಗಿದೆ ?

ಶ್ರೀ ಡಿ. ದೇವರಾಜ್ ಅರಸ್.— ಅಂದಾಜು ಮಾಡಿದ್ದು ೨೩ ಲಕ್ಷಕ್ಕೆ, ಅಲ್ಲಿ ಈಗ ಕೆಲಸ ಪ್ರಾರಂಭ ವಾಗಿದೆ ಮೊದಲು ಅಲ್ಲಿ ಕೆಲಸ ನಿಂತು ಹೋಗಿತ್ತು, ಅಲ್ಲಿ ಒಬ್ಬ ಕಂಟ್ರಾಕ್ಟರ್‌ಗೆ ಕೊಡಲಾಗಿತ್ತು, ಅವರು ಕೆಲಸ ಮಾಡದೇ ನಿಲ್ಲಿಸಿದ್ದರಿಂದ ಇದು ಇಷ್ಟು ನಿಧಾನವಾಗುವುದಕ್ಕೆ ಕಾರಣವಾಯಿತು. ಅದು ಈಗ ಸ್ವಲ್ಪ ಜಾಸ್ತಿ ಎಸ್ಟಿಮೇಟ್ ಆಗಿ ೨೫ ಲಕ್ಷ ಅಂದಾಜು ಆಗಿದೆ.

ಶ್ರೀ ಎಸ್. ಎಂ. ಲಿಂಗಪ್ಪ.— ಖರ್ಚು ಆಗಿರುವ ಹಣವೆಷ್ಟು ಸ್ವಾಮಿ ?

ಶ್ರೀ ಡಿ. ದೇವರಾಜ್ ಅರಸ್.— ಇದುವರೆಗೂ ಕೇವಲ ೪ ಲಕ್ಷ ಮಾತ್ರ ಖರ್ಚಾಗಿರುವುದು.

ಶ್ರೀ ಎಸ್. ಎಂ. ಲಿಂಗಪ್ಪ.— ಎಂಟು ವರ್ಷಗಳ ಹಿಂದೆ ಮಂಜೂರು ಆಗಿದ್ದು ಇನ್ನೂ ಮಂದಗತಿ ಯಲ್ಲಿ ಕೆಲಸ ನಡೆಯುತ್ತಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಆದನ್ನು ಆದಷ್ಟು ತ್ವರಿತ ಗತಿಯಲ್ಲಿ ಕಾರ್ಯ ಪೂರೈಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?